

# ದಿಗಂತ್ ಅಡಿಕೆ ಕೃಷಿ

ಲವರ್ ಬಾಯ್ ಆಗಿ, ಸೋಂಬೇರಿ ಹುಡುಗನಾಗಿ ತೆರೆಯ ಮೇಲೆ ಮಿಂಚಿದ್ದ ದಿಗಂತ್ ಈಗ ಅಡಿಕೆ ಬೆಳೆಗಾರನಾಗಲು ಹೊರಟಿದ್ದಾರೆ. ಅಷ್ಟೇ ಅಲ್ಲ, ಗೊಬ್ಬರದ ಅಂಗಡಿಯಿಟ್ಟು ವ್ಯಾಪಾರಕ್ಕೂ ಇಳಿದಿದ್ದಾರೆ.

ಬಣ್ಣದ ಲೋಕ ಬಿಟ್ಟು ಮಣ್ಣಿನ ಕೆಲಸಕ್ಕೆ ಇಳಿದಿದ್ದು ಯಾಕೆ ಎಂಬ ಅನುಮಾನ ಮೂಡಿತೆ? ದಿಗಂತ್ ಬಣ್ಣದ ಲೋಕವನ್ನೇನೂ ಬಿಟ್ಟಿಲ್ಲ; ಆದರೆ ಮಣ್ಣಿನ ಸಹವಾಸಕ್ಕೆ ಇಳಿದಿರುವುದು ನಿಜ. ಅದು ನಿಜಬದುಕಿನಲ್ಲಲ್ಲ. ತೆರೆಯ ಮೇಲೆ.

ದಿಗಂತ್ ಒಪ್ಪಿಕೊಂಡಿರುವ ಹೊಸ ಸಿನಿಮಾದಲ್ಲಿ ಅವರು ಅಡಿಕೆ ಬೆಳೆಗಾರನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹೇಳಿಕೇಳಿ ತೀರ್ಥಹಳ್ಳಿಯ ಹುಡುಗ. ಅಡಿಕೆ ತೋಟದ ಪರಿಚಯ ಇದ್ದೇ ಇರುತ್ತದೆ. ಹಾಗಾಗಿ ಆ ಪಾತ್ರ ನಿರ್ವಹಿಸುವುದು ಕಷ್ಟವಾಗಲಾರದು.

ಇಲ್ಲಿ ಇನ್ನೊಂದು ವಿಶೇಷವೂ ಇದೆ. ಈ ಚಿತ್ರದಲ್ಲಿ ದಿಗಂತ್ ಜೊತೆ ತೆರೆಯನ್ನು ಹಂಚಿಕೊಳ್ಳುತ್ತಿರುವುದು ನಿಜಬದುಕಿನ ಸಂಗಾತಿ ಐಂದ್ರಿತಾ ರೇ. ಬೆಂಗಾಲಿ ಮೂಲದ ಈ ಬೆಡಗಿಗೆ ಈಗ ಮಲೆನಾಡಿನ ಅಡಿಕೆ ತೋಟದಲ್ಲಿ ಕಾಲು ಉಳುಕಿಸಿಕೊಳ್ಳದೇ ಸೊಂಟ ಬಳುಕಿಸಬೇಕಾದ ಸವಾಲು. ಅಂದ ಹಾಗೆ ಅವರು ಈ ಚಿತ್ರದಲ್ಲಿ ನ್ಯಾಯವಾದಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಗೊಬ್ಬರ ಮಾರುವ ಹುಡುಗನಿಗೂ ಕರಿಕೋಟಿನ ಹುಡುಗಿಗೂ ಎತ್ತಣಿಂದೆತ್ತಣ ಸಂಬಂಧ ಬೆಳೆಯುವುದು ಎಂಬುದನ್ನು ತೆರೆಯ ಮೇಲೇ ನೋಡಬೇಕು.

ಈ ಹಿಂದೆ ಕಿರುಚಿತ್ರಗಳನ್ನು ನಿರ್ದೇಶಿಸಿದ ಅನುಭವ ಇರುವ ವಿನಾಯಕ ಕೋಡ್ಸರ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಮಲೆನಾಡಿನ ಬದುಕನ್ನು ಬಿಂಬಿಸುವ ಈ ಕಥೆಯನ್ನು ಅವರೇ ರಚಿಸಿದ್ದಾರೆ. ಮಾರ್ಚ್ ಮಧ್ಯಭಾಗದಿಂದ ಚಿತ್ರೀಕರಣ ಆರಂಭಿಸುವ ಯೋಜನೆಯನ್ನು ಅವರು ಹಾಕಿಕೊಂಡಿದ್ದಾರೆ. ■

# ಸಂಜನಾ ಅದ್ದೂರಿ ಲವ್ ಸ್ಟೋರಿ

ಮುದ್ದುಮುಖದ ಸಂಜನಾ ಗಾಂಧಿನಗರದಲ್ಲಿ ಬಹುವೇಗವಾಗಿ ಬೇಡಿಕೆ ಕುದುರಿಸಿಕೊಳ್ಳುತ್ತಿರುವ ನಟಿ. ಇನ್ನೇನು ಬಿಡುಗಡೆಗೆ ಸಜ್ಜಾಗಿರುವ 'ಸಲಗ'ನಿಗೂ ಸಂಜನಾ ಜೋಡಿಯಾಗಿದ್ದಾರೆ.

ಏರುಮುಖವಾಗಿ ಸಾಗುತ್ತಿರುವ ಅವರ ಫಿಲ್ಮೋಗ್ರಫಿಯಲ್ಲಿ ಹೊಸತಾಗಿ ಇನ್ನೊಂದು ಸಿನಿಮಾ ಸೇರಿಕೊಂಡಿದೆ. ಎ.ಪಿ. ಅರ್ಜುನ್ ಅವರ ಹೊಸ ಚಿತ್ರಕ್ಕೆ ಸಂಜನಾ ನಾಯಕಿಯಾಗಿ ನಟಿಸಲು ಸಹಿ ಹಾಕಿದ್ದಾರೆ. ವಿರಾಟ್ ಈ ಚಿತ್ರದ ನಾಯಕ. ಅರ್ಜುನ್ ಅವರ 'ಕಿಸ್', ಕಳೆದ ವರ್ಷ ಬಿಡುಗಡೆಗೊಂಡು ಪ್ರೇಕ್ಷಕರಿಗೂ ಸುಳಿವಿಲ್ಲದೇ ಶತದಿನೋತ್ಸವದ ದಾಖಲೆ ಪಟ್ಟಿಯಲ್ಲಿ ಸೇರಿಕೊಂಡ ಚಿತ್ರ. ತಮ್ಮ ಸಿನಿಮಾಗಳಲ್ಲಿ ಕತೆಗಿಂತ ಅದ್ದೂರಿತನವನ್ನೇ ನೆಚ್ಚಿಕೊಳ್ಳುವ ಅರ್ಜುನ್ ಈ ಹೊಸ ಸಿನಿಮಾದ ಹೆಸರನ್ನೇ 'ಅದ್ದೂರಿ ಲವರ್ಸ್' ಎಂದು ಇಟ್ಟಿದ್ದಾರೆ. ಲವ್‌ಸ್ಟೋರಿಗಳನ್ನು ಇದುವರೆಗೂ ತೋರಿಸಿರದ ರೀತಿ ತೋರಿಸುತ್ತೇವೆ ಅನ್ನುವುದು ಅವರ ಆತ್ಮವಿಶ್ವಾಸದ ಮಾತು.

ಹೆಸರಲ್ಲಿರುವ ಅದ್ದೂರಿತನ ಚಿತ್ರದಲ್ಲಿಯೂ ಇರಲಿದೆ ಎನ್ನುವುದು ಅರ್ಜುನ್ ಮಾತು. 'ಕಿಸ್' ಚಿತ್ರದ ಮೂಲಕ ನಾಯಕನಾಗಿ ಪರಿಚಿತರಾಗಿದ್ದ ವಿರಾಟ್ ಅವರೇ ಈ ಚಿತ್ರದಲ್ಲಿಯೂ ನಾಯಕನಾಗಿ ಮುಂದುವರಿದಿದ್ದಾರೆ. ಕಿಸ್ ಚಿತ್ರದ ಮೂಲಕ ಗಳಿಸಿಕೊಂಡಿರುವ ಅಭಿಮಾನಿ ಬಳಗವನ್ನು ಇಮ್ಮಡಿ ಮಾಡಿಕೊಳ್ಳುವ ಉತ್ಸಾಹದಲ್ಲಿ ಅವರಿದ್ದಾರೆ.

ಸಂಜನಾ ಈ ಚಿತ್ರದಲ್ಲಿ ಬಬ್ಲಿ ಹುಡುಗಿಯಾಗಿ ಕಾಣಿಸಿಕೊಳ್ಳಲಿದ್ದಾರಂತೆ. ಬೆಂಗಳೂರು, ಊಟಿ ಜೊತೆಗೆ ಆಸ್ಟ್ರೇಲಿಯಾದಲ್ಲಿಯೂ ಚಿತ್ರವನ್ನು ಚಿತ್ರೀಕರಿಸಲು ತಂಡ ಯೋಜಿಸಿಕೊಂಡಿದೆ. ರಂಗಾಯಣ ರಘು ಮತ್ತು ತಾರಾ ಮುಖ್ಯಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ಹಿಂದಿನ ವರ್ಷದ 'ಕಿಸ್' ಶತದಿನ ಕಂಡಿತು. ಈ ಚಿತ್ರ ಅದಕ್ಕಿಂತ ಒಳ್ಳೆಯ ಸಿನಿಮಾ ಎನ್ನುವುದು ಅರ್ಜುನ್ ಉವಾಚ. ಹಾಗಾದರೆ ಇದು ನೂರೈವತ್ತು ದಿನಗಳಾದರೂ ಪ್ರದರ್ಶಿತಗೊಳ್ಳುತ್ತದೆ ಎನ್ನುವುದು ಗಾಂಧಿನಗರದ ಹರಟೆಕಟ್ಟೆಯಲ್ಲಿ ಹರಿದಾಡುತ್ತಿರುವ ಮಾತು. ಈಗ ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರ ಸಂಖ್ಯೆಗೂ ಚಿತ್ರಪ್ರದರ್ಶನ ಕಂಡ ದಿನಗಳ ಸಂಖ್ಯೆಯೂ ಸಂಬಂಧವೇ ಇಲ್ಲದ ವಿದ್ಯಮಾನಗಳು ಸಾಮಾನ್ಯ ಎನ್ನುವಂತಾಗಿಬಿಟ್ಟಿದೆ. ಹಾಗಾಗಿ 'ಅದ್ದೂರಿ ಲವರ್ಸ್' ನೂರೈವತ್ತು ದಿನ ಪ್ರದರ್ಶನ ಕಂಡರೂ ಅಚ್ಚರಿಯೇನಿಲ್ಲ ಬಿಡಿ. ■



ಚಿತ್ರ:
ಅಭಿಷೇಕ್ ಎಸ್. ಎನ್.